# ಎಮರ್ಜಂಟ್ ಲಿಟರಸಿ: ಚಿಲ್ಡ್ರನ್ಸ್ ಬುಕ್ಸ್ ಫ್ರಮ್ ೦-೩- ಬೆಟಿನಾ ಕುಮರ್ಲಿಂಗ್ ಮೈಬೋ

- ವಂದನಾ ಪುರಿ




**Emergent Literacy: Children’s books from 0-3**
Edited by Bettina Kummerling-Meibauer

**ಪುಸ್ತಕ: ಎಮರ್ಜಂಟ್ ಲಿಟರಸಿ: ಚಿಲ್ಡ್ರನ್ಸ್ ಬುಕ್ಸ್ ಫ್ರಂಮ್ ೦-೩ (ಉದಯಿಸುತ್ತಿರುವ ಸಾಕ್ಷರತೆ ೦ ಯಿಂದ ೩ ತರಗತಿಯ ಮಕ್ಕಳಿಗೆ)**

**ಸಂಪಾದಕರು: ಬೆಟಿನಾ ಕುಮರ್ಲಿಂಗ್ ಮೈಬೋ**
**ವರ್ಷ: ೨೦೧೧**
**ಪ್ರಕಟನೆ: ಅಮ್‌ಸ್ಟ್ರಡ್ಯಾಮ್, ಫಿಲಡೆಲ್ಫಿಯಾ**
**ಐಎಸ್‌ಬಿಎನ್: ೯೭೮೯೦೨೭೨೧೮೦೮೭; ಇಃ೯೭೮೯೦೨೭೨೮೩೨೩೮ emergent literacy**

ಮೂರು ವರ್ಷದ ಒಳಗಿನ ಮಕ್ಕಳ ಮೇಲೆ ಪರಿಣಾಮ ಬೀರುವಂತಹ ಪುಸ್ತಕಗಳು ಮತ್ತು ಚಿತ್ರ ಪುಸ್ತಕಗಳ ಮೇಲೆ ನಡೆದಿರುವ ಅಧ್ಯಯನಗಳು ಬಹಳ ಕಡಮೆ. ಅಕ್ಷರಜ್ಞಾನದ ಬಗೆಗೆ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಮತ್ತು ಓದುವ ಒಲವನ್ನು ಬೆಳೆಸುವ ನಿಟ್ಟಿನಲ್ಲಿ ಚಿತ್ರಗಳನ್ನು ಒಳಗೊಂಡ ಪುಸ್ತಕಗಳು ಮತ್ತು ಕತೆಗಳು ಚಿಕ್ಕ ವಯಸ್ಸಿನ ಮಕ್ಕಳ ಮನಸ್ಸನ್ನು ಬಹಳ ಪ್ರಭಾವಿಸುತ್ತವೆ. ಎಮರ್ಜಂಟ್ ಲಿಟರಸಿಯು (ಉದಯಿಸುತ್ತಿರುವ ಸಾಕ್ಷರತೆ, ಅಂದರೆ ಶಾಲಾ ಪೂರ್ವದಲ್ಲಿಯೇ ಎಳೆಯ ಮಕ್ಕಳಲ್ಲಿ ಅಕ್ಷರಜ್ಞಾನ ಮೊಳೆಯುವ ಪ್ರಕ್ರಿಯೆ) ಹತ್ತು ತಿಂಗಳ ಶಿಶುವಿನಿಂದ ಹಿಡಿದು ಮೂರು ವರ್ಷದ ಒಳಗಿನ ವರೆಗಿನ ಮಕ್ಕಳು ಹೇಗೆ ಚಿತ್ರಪುಸ್ತಕಗಳಲ್ಲಿರುವ ಚಿತ್ರಗಳನ್ನು ನೋಡಿ ಕಲಿಯುತ್ತವೆ

ಅಥವಾ ಹೇಗೆ ಮಕ್ಕಳ ಪುಸ್ತಕವೊಂದರ ಕತೆಯೊಂದನ್ನು ಆಲಿಸುವ ಮೂಲಕ ಕಲಿಯುತ್ತವೆ ಎಂಬ ಅಂಶಗಳ ಮೇಲೆ ಬೆಳಕು ಹರಿಸುತ್ತದೆ ಮಾತ್ರವಲ್ಲದೇ ಆ ರೀತಿಯ ಕಲಿಕಾ ಪ್ರಕ್ರಿಯೆಗಳನ್ನು ಉಂಟು ಮಾಡಲು ಯಾವ ಬಗೆಯ ಮಾನಸಿಕ ಪೂರ್ವಸಿದ್ಧತೆಗಳು ಅವಶ್ಯವಾಗಿವೆ ಎಂಬುದನ್ನು ನಾವು ಅರಿಯುವ ಬಗೆಯನ್ನು ವಿವರಿಸುತ್ತದೆ. ಇವು ಎಳೆಯ ಮಕ್ಕಳಲ್ಲಿ ಸಾಕ್ಷರತೆ ಉದಯಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಸಂಶೋಧನೆಯ ದೃಷ್ಟಿಯಿಂದಲೂ ಬಹಳ ಮಹತ್ತ್ವದ ಪ್ರಶ್ನೆಗಳಾಗಿವೆ. ಈ ಪುಸ್ತಕದೊಳಗಿನ ಅಧ್ಯಾಯಗಳು ಟ್ರೂಸ್‌ಡಾರ್ಫ್‌ನಲ್ಲಿರುವ ಬರ್ಗ್ ವಿಸೇಮ್ ಚಿತ್ರಪುಸ್ತಕ ವಸ್ತುಸಂಗ್ರಹಾಲಯದಲ್ಲಿ ಆಯೋಜಿಸಲ್ಪಟ್ಟ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ (ಜರ್ಮನಿ, ಮಾರ್ಚ್ ೨೦೦೯) ಮಂಡಿಸಲಾದ ಸಂಶೋಧನಾ ಪ್ರಬಂಧಗಳ ಪರಿಷ್ಕೃತ ಆವೃತ್ತಿಗಳಾಗಿವೆ.

ಈ ಪುಸ್ತಕದಲ್ಲಿ ಒಟ್ಟು ಹದಿನಾಲ್ಕು ಅಧ್ಯಾಯಗಳಿವೆ. ಅವುಗಳನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ. "ಪ್ರಾರಂಭದ ಸಾಕ್ಷರತಾ ಪ್ರಕ್ರಿಯೆಯ ಆವರಣಗಳು" (Premises of early literacy) ಎಂಬುದು ಮೊದಲ ಭಾಗ. ಈ ಭಾಗದಲ್ಲಿ ಮೂರು ಅಧ್ಯಾಯಗಳಿವೆ. ಈ ಅಧ್ಯಾಯಗಳಲ್ಲಿ ಮೂರು ವರ್ಷದ ಒಳಗಿನ ಮಕ್ಕಳ ಕಾಲ್ಪನಿಕ ಮತ್ತು ದಿನನಿತ್ಯದ ಘಟನೆಗಳನ್ನು ಪಠ್ಯರೂಪಕ್ಕೆ ಅಳವಡಿಸಿಕೊಂಡ ನಿರೂಪಣೆಗಳಿವೆ; ಚಿಕ್ಕ ಮಕ್ಕಳು ಬಣ್ಣಗಳನ್ನು ಹೇಗೆ ಗ್ರಹಿಸುತ್ತಾರೆ ಎಂಬುದರ ನಿರೂಪಣೆಗಳಿವೆ; ಮತ್ತು ಚಿತ್ರ ಪುಸ್ತಕಗಳಲ್ಲಿನ ವಿನ್ಯಾಸಗಳನ್ನು ಮತ್ತು ಆಧುನಿಕ ಕಲೆಯನ್ನು ಹೇಗೆ ಗ್ರಹಿಸುತ್ತಾರೆ ಎಂಬುದರ ನಿರೂಪಣೆಗಳಿವೆ. ಎರಡನೇ ಭಾಗವು, "ಮೂರು ವರ್ಷದ ಒಳಗಿನ ಮಕ್ಕಳ ಸಲುವಾಗಿ ಇರುವ ಚಿತ್ರ ಪುಸ್ತಕಗಳು (Picture books for children under three)" ಎಂಬ ಶೀರ್ಷಿಕೆಯಡಿಯಲ್ಲಿದೆ. ಇದರಲ್ಲಿ ೬ ಅಧ್ಯಾಯಗಳಿವೆ. ಅವುಗಳು, ಎಳೆಯ ಮಕ್ಕಳಲ್ಲಿ ಸಾಹಿತ್ಯದ ಅಭಿರುಚಿ ಮತ್ತು ಗುಣಗ್ರಹಣ ಹೇಗೆ ಆರಂಭವಾಗುತ್ತದೆ; ನಾಮಪದ ಮತ್ತು ಕ್ರಿಯಾಪದಕ್ಕೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಹೇಗೆ ಅರ್ಜಿಸುತ್ತಾರೆ; ಆಡುತ್ತ ಓದುವುದು; ೦-೩ರ ವರೆಗಿನ ಮಕ್ಕಳಿಗಾಗಿ ಇರುವ ಚಿತ್ರಪುಸ್ತಕಗಳಲ್ಲಿ ಬರುವ ರೂಪಕಗಳು; ಎಳೆಯ ಮಕ್ಕಳಲ್ಲಿ ಸಾಕ್ಷರತೆಯನ್ನು ಸಾಧಿಸಲು ಇರುವ ಹಾದಿಗಳು; ವರ್ತನೆಗೆ ಸಂಬಂಧಿಸಿದ ತಾಲೀಮು ಮತ್ತು ವೈಜ್ಞಾನಿಕವಾಗಿ ಆಲೋಚಿಸುವುದಕ್ಕೆ ಇರುವ ಸಂಬಂಧಗಳು, ಇತ್ಯಾದಿಗಳನ್ನು ಚರ್ಚಿಸಲಾಗಿದೆ. "ಮಗು ಮತ್ತು ಪುಸ್ತಕದ ನಡುವಿನ ಸಂವಹನ: ಪ್ರಕರಣ ಅಧ್ಯಯನಗಳು (Child-book interactions: case studies)" ಎಂಬ ಶೀರ್ಷಿಕೆ ಇರುವ ಮೂರನೇ ಭಾಗದಲ್ಲಿ ನಾಲ್ಕು ಅಧ್ಯಾಯಗಳಿವೆ. ತಾಯಿಯು ತನ್ನ ಮಕ್ಕಳಿಗೆ ಚಿತ್ರ ಪುಸ್ತಕಗಳನ್ನು ಓದಿ ಹೇಳುವಾಗಿನ ಸಂದರ್ಭದ ವಸ್ತುಗಳು ಮತ್ತು ಕ್ರಿಯಾ ಪರಿಕಲ್ಪನೆಗಳು; ಚಿತ್ರಗಳ ಜೊತೆಗೆ ವಿವರಣೆಗಳು ಇಲ್ಲವಾದಾಗ ಹೇಗೆ ಓದುವುದು; ಆಟ, ಮಾತು ಮತ್ತು ಕತೆಗಳೊಂದಿಗೆ ಸಾಕ್ಷರತೆ ಮತ್ತು ತನ್ನತನದ (self) ಅರಿವನ್ನು ಮೂಡಿಸುವುದು; ಮತ್ತು ಎಳೆಯ ದ್ವಿಭಾಷಿ ಮಕ್ಕಳ ಭಾವನಾತ್ಮಕ ಬೆಳವಣಿಗೆಯನ್ನು ಚಿತ್ರಪುಸ್ತಕಗಳಿಗೆ ಬರುವ ಸ್ಪಂದನೆಗಳು ಹೇಗೆ ಬಿಂಬಿಸುತ್ತವೆ ಮತ್ತು ಅದಕ್ಕೆ ಪ್ರೋತ್ಸಾಹ ನೀಡುತ್ತವೆ ಎಂಬ ವಿಚಾರಗಳು ಕೊನೆಯ ಈ ನಾಲ್ಕು ಅಧ್ಯಾಯಗಳಲ್ಲಿವೆ.

ಎಮರ್ಜೆಂಟ್ ಲಿಟರಸಿ (ಶಾಲಾ ಪೂರ್ವದಲ್ಲಿಯೇ ಎಳೆಯ ಮಕ್ಕಳಲ್ಲಿ ಸಾಕ್ಷರತೆ ಮೊಳೆಯುವ ಪ್ರಕ್ರಿಯೆ) ಮತ್ತು ಪ್ರಾರಂಭಿಕ ಹಂತದ ಸಾಕ್ಷರತೆಯ ಬಗೆಗಿನ ಪ್ರಾಯೋಗಿಕ ಅಂಶಗಳ ಮೇಲೆ ಬಹಳಷ್ಟು ಪುಸ್ತಕಗಳನ್ನು ರಚಿಸಲಾಗಿದೆ. ಹಾಗಿದ್ದರೂ ಈ ಪುಸ್ತಕಕ್ಕೆ ಒಂದು ಬಹುಜ್ಞಾನಶಿಸ್ತೀಯ ವಿಧಾನದ (ಕಲೆಯ ಇತಿಹಾಸ, ಮಕ್ಕಳ ಸಾಹಿತ್ಯದ ಮೇಲಿನ ಸಂಶೋಧನೆ, ಚಿತ್ರಪುಸ್ತಕಗಳ ಸಿದ್ಧಾಂತ, ಭಾಷಾಶಾಸ್ತ್ರ, ಸಂಜ್ಞಾನಾತ್ಮಕ ಮನೋವಿಜ್ಞಾನ

ಮತ್ತು ಬೋಧನಾವಿಧಾನ) ದೃಷ್ಟಿಕೋನವಿದೆ. ಇದು ಆರಂಭಿಕ ಹಂತದ ಸಾಕ್ಷರತೆ ಮತ್ತು ೦-೩ರ ಒಳಗಿನ ವಯೋಮಾನದ ಮಕ್ಕಳ ಪುಸ್ತಕಗಳ ನಡುವೆ ಇರಬೇಕಾದ ಬಲವಾದ ಸಂಬಂಧವನ್ನು ಎತ್ತಿ ತೋರಿಸುತ್ತದೆ.

***

**ಚಿಂತನಾತ್ಮಕ ಪ್ರಶ್ನೆಗಳು:**

೧. ಮಕ್ಕಳ ಆರಂಭಿಕ ಭಾಷಾಕಲಿಕೆಗೆ ಚಿತ್ರ ಪುಸ್ತಕಗಳನ್ನು ಬಳಸಿದ ನಿಮ್ಮ ಅನುಭವ ಹೇಗಿತ್ತು?

೨. ಚಿತ್ರ ಪುಸ್ತಕಗಳು ಬಹುಭಾಷಾ ತರಗತಿಯ ಕಲಿಕೆಯ ಪ್ರಕ್ರಿಯೆಗೂ ಉಪಯುಕ್ತವಾಗಬಹುದು ಅಲ್ಲವೆ?

೩. ಭಾಷೆಯ ಸಂದರ್ಭದಲ್ಲಿ ಲೇಖಕನ ಆಶಯ ಮತ್ತು ಓದುಗರ ಅರ್ಥೈಸುವಿಕೆ ಭಿನ್ನವಾಗುವುದು ಹೇಗೆ?

**ವಂದನಾ ಪುರಿ** ಇಲಿನಾಯ್ಸ್ ಯುನಿವರ್ಸಿಟಿಯಿಂದ ಭಾಷಾಶಾಸ್ತ್ರದಲ್ಲಿ ಪಿಎಚ್.ಡಿ., ಪಡೆದಿದ್ದಾರೆ. ಅವರ ಸಂಶೋಧನಾ ಆಸಕ್ತಿಯು ಅಕೌಸ್ಟಿಕ ಫೋನೆಟಿಕ್ಸ್, ಇನ್ಟೋನೇಶನ್, ಪ್ರೊಸೊಡಿ, ಬೈಲಿಂಗ್ವಾಲಿಸಂ, ಇಂಗ್ಲಿಷ್ ಮತ್ತು ಸೋಶಿಯೋಲಿಂಗ್ವಿಸ್ಟಿಕ್ಸ್‌ಗಳನ್ನು ಒಳಗೊಂಡಿದೆ. ಈಗ ಅವರು ಉದಯಪುರದ ವಿದ್ಯಾಭವನ ಸೊಸೈಟಿಯ ಸಲಹೆಗಾರರಿದ್ದಾರೆ. vandana22puri@yahoo.com

**ಅನುವಾದ:** ಪ್ರಜ್ಞಾ / **ಪರಿಶೀಲನೆ:** ಮಂಜುನಾಥ್ ಎಸ್. ವಿ

**ಮೂಲ:** Language and Language Teaching, Volume 3 Number 2 Issue 6 July 2014.